**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

ಎಸ್. ಸಿ. ನಂ. **27/2022**

ಪಿ ಡಬ್ಲ್ಯೂ: **3**

ಸಿ ಡಬ್ಲ್ಯೂ: **3**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜು |
| ತಂದೆಯ ಹೆಸರು | : | ಶೇಖಪ್ಪ ಕಟ್ಟಿಮನಿ |
| ವಯಸ್ಸು | : | 21 ವರ್ಷಗಳು |
| ಉದ್ಯೋಗ | : | ಮೆಕ್ಯಾನಿಕ |
| ವಾಸಸ್ಥಳ | : | ಲೈನ ಬಜಾರ ಧಾರವಾಡ |

ದಿನಾಂಕ:03-01-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:

2 ವರ್ಷದ ಹಿಂದೆ ಪೋಲೀಸರು ನನ್ನ ಒಬ್ಬ ಹುಡುಗಿಯ ಮನೆ ಮುಂದೆ ಕರೆಸಿದರು. ಅಲ್ಲಿ ನನ್ನ ಸಹಿ ಮಾಡಿಸಿಕೊಂಡರು. ಪೋಲೀಸರು ಆ ಹುಡುಗಿಯ ಮನೆಯ ಮುಂದೆ ಮತ್ತು ಹೊರಗೆ ಫೋಟೋ ತೆಗೆದರು. ಅಲ್ಲಿ ಏನು ಆಗಿತ್ತು ಅಂತಾ ನನಗೆ ಗೊತ್ತಿಲ್ಲ. ನನ್ನ ಸಹಿ ನೋಡಿದರೆ ಗುರ್ತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿಪಿ-2 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರ್ತಿಸಿದ ಅವರ ಸಹಿಯನ್ನು ನಿಪಿ-2(ಸಿ) ಅಂತಾ ಗುರ್ತಿಸಲಾಯಿತು. ಈಗ ನನಗೆ ತೋರಿಸುತ್ತಿರುವ 2 ಫೋಟೋಗಳಲ್ಲಿ ನನ್ನ ಭಾವ ಚಿತ್ರ ಇದೆ, ಅದರಲ್ಲಿ ಆ ಹುಡುಗಿಯ ಭಾವ ಚಿತ್ರಗಳು ಇವೆ. ಸದರಿ ಫೋಟೋಗಳನ್ನು ಈಗಾಗಲೆ ನಿಪಿ-3

ಮತ್ತು ನಿಪಿ-4 ಅಂತಾ ಗುರ್ತಿಸಲಾಗಿದೆ. ಪೋಲೀಸರು ಸಾಕ್ಷಿ ಅಂತಾ ಹೇಳಿ ನನ್ನ ಸಹಿ ಮಾಡಿಸಿಕೊಂಡರು. ಪೋಲೀಸರು ನನ್ನ ಸಮಕ್ಷಮ ಏನ್ನನ್ನು ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ :</u>

ದಿ:22-02-2022 ರಂದು ಮುಂಜಾನೆ 11-00 ಘಂಟೆಗೆ ಧಾರವಾಡದ ಲೈನ ಬಜಾರನ ಕೊರವರ ಓಣಿಯಲ್ಲಿ ಪೋಲೀಸರು ತನುಜಾ ಇವಳಿಗೆ ಶಿವಶಂಕರ ಗರಗ ಇವನು ಚಾಕುವಿನಿಂದ ಚುಚ್ಚಿದ ಘಟನಾ ಸ್ಥಳದಲ್ಲಿ ತನುಜಾ ತೋರಿಸಿದಂತೆ ನನ್ನ ಸಮಕ್ಷಮ ಪಂಚನಾಮೆ ಮಾಡಿದರು ಅಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ ನಿಪಿ-3 ಮತ್ತು ನಿಪಿ-4 ಪೋಟೋಗಳನ್ನು ತೆಗೆದಿದ್ದಾರೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಅರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಅಂತಾ ಹೇಳುತ್ತಾರೆ.

<u>ಮರು ವಿಚಾರಣೆ:</u> ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

2 ಎಸ ಸಿ ನಂಬರ 27/2022 ( ಪಿ ಡಬ್ಲ್ಯೂ:3)

ಧಾರವಾಡ.